ಬಿದ್ದುಬಿಟ್ಟಳು. ಭದ್ರಗೊಮಾರ ವಾಪಸು ಬಂದು ಮುತ್ತಿನ ಬುಡದ ಮರ ಕಿತ್ತುಕೊಂಡು, ರಾಜಕುಮಾರಿನೂ ಕರೆದುಕೊಂಡು ಭೂಮಾರ್ಗದಲ್ಲಿ ಹಗ್ಗದ ಮಿಣಿ ಇರೋ ಕಡೆ ನಿಂತು, ಅಪ್ಪಾ ರುದ್ರಗೊಮಾರ, ರೈತಗೊಮಾರ ಅಂತ ಕೂಗು ಹಾಕಿದ. ಮೇಲಿಂದ ಇವರು ಇಲ್ಲೇ ಇದೀವಪ್ಪಾ ಅಂದರು. ಭದ್ರಗೊಮಾರ ಮೊದಲು ರಾಜಕುಮಾರಿನ ಮೇಲಕ್ಕೆ ಕಳಿಸಿದ. ಆಮೇಲೆ ವೃಕ್ಷನ ಹಗ್ಗಕ್ಕೆ ಕಟ್ಟಿದ. ಸುಂದರಿಯೂ, ಮುತ್ತಿನ ಮರವೂ ಬಂದಾಗ ರುದ್ರಗೊಮಾರನು ಆನಂದ ಬಿದ್ದು ನೀನು ಯಾರಮ್ಮ, ಪಾತಾಳದಿಂದ ಬರುತ್ತಿರುವಂಥ ನಾಗಕನ್ಯೇನಾ ಅಂತ ಕೇಳಿದ. ಅದಕ್ಕೆ ಅವಳು ಅಯ್ಯೋ ನಾನು ರಾಜನ ಮಗಳು. ಹಿಂದೇ ವನಾಂತ್ರಕ್ಕೆ ಬಂದಿದ್ದಾಗ ಬ್ರಹ್ಮ ರಾಕ್ಷಸಿ ಹಿಡಿದು ಪಾತಾಳಲೋಕಕ್ಕೆ ಹೊತ್ಕಂಡು ಹೋಗಿಬಿಟ್ಟಳು. ನನಗೂ ಈ ವನವಾಸ, ಪಾತಾಳವಾಸ, ರಾಕ್ಷಸಿಸೇವೆ ಮಾಡಿ ಸಾಕಾಗಿ ಹೋಗಿತ್ತು. ಈಗ ಬಂದಂಥಾ ಪುಣ್ಯಾತ್ಮ ನನ್ನ ಕಾಪಾಡಿದ ಅಂತಂದಳು. ಆಗ ರುದ್ರಗೊಮಾರ ಈ ರಾಜಕುಮಾರಿ ನನ್ನಂಥಾ ರಾಜಕುಮಾರನಿಗೇ ಸರಿ ಅಂದುಕೊಂಡು ನಡಿ ಹೋಗಾನ ಅಂದ. ಈ ಕಡೆ ಭದ್ರಗೊಮಾರ ಪಾತಾಳಲೋಕದಿಂದ ಹಗ್ಗ ಬಿಡ್ರಪ್ಪಾ, ಹಗ್ಗ ಬಿಡ್ರಪ್ಪಾ ಅಂತ ಕೂಗ್ತಾವನೇ. ಈ ರಾಜಕುಮಾರಿನೂ ಬಾಯಿ ಬಾಯಿ ಬಡಕಂತಾವಳೇ. ರುದ್ರಗೊಮಾರ, ರೈತಗೊಮಾರ ಆ ರಾಜಕುಮಾರಿನೂ, ಮುತ್ತಿನ ಮರನೂ ಎತ್ತಿಕೊಂಡು ತಮ್ಮ ಪಟ್ಟಣದ ಕಡೆ ಸವಾರಿ ಹೊಡೆದರು.

ಯಾವಾಗ ಮಕ್ಕಳು ಮುತ್ತಿನ ಬುಡದ ಮರ ತಂದರೋ ಚಂದ್ರಶೇಖರ ಮಹಾರಾಜನು ಎಲಾ ಎಲಾ ನನ್ನ ಮಕ್ಕಳು ಇನ್ನೆಂಥಾ ಶೂರರು ಅಂತೇಳಿ ಕೊಂಡಾಡ್ತವನೇ! ರುದ್ರಗೊಮಾರನಿದ್ದು ಅಪ್ಪಾ ನೀನು ಕೇಳಿದ ವೃಕ್ಷದೊಂದಿಗೆ ರಾಜಕುಮಾರಿನೂ ತಂದಿದ್ದೀನಿ, ಅವಳನ್ನೇ ನಾನು ಲಗ್ನವಾಗುತ್ತೀನಿ ಅಂತಂದ. ತಂದೆಯಿದ್ದು, ಆಗಲಪ್ಪಾ ಅದಕ್ಕೇನಂತೆ ಅಂದ. ಆಗ ರಾಜಕುಮಾರಿ ರಾಜನಿಗೂ, ರುದ್ರಗೊಮಾರನಿಗೂ ಒಂದು ಕಂಡೀಷನ್ನು ಹಾಕಿದಳು. ಸ್ವಾಮಿ ನಾನು ಇಷ್ಟು ದಿನ ಪಾತಾಳ ಲೋಕದಲ್ಲಿ ಬ್ರಹ್ಮ ರಾಕ್ಷಸಿ ಕೂಡೆ ಇದ್ದು ಪಾಪಿಷ್ಠೆಯಾಗಿಬಿಟ್ಟಿದ್ದೀನಿ. ಅದಕ್ಕಾಗಿ ಮೂರು ತಿಂಗಳು ಒಂದು ವತ್ರ ಮಾಡಿ ಆಮೇಲೆ ಲಗ್ನ ಆಗುತ್ತೀನಿ ಎಂದಳು. ರುದ್ರಗೊಮಾರ ಎಲಾ ಇವಳು ನನ್ನ ವಶ ಆಗದಕ್ಕೆ ಇನ್ನೂ ಮೂರು ತಿಂಗಳು ಕಾಯಬೇಕಲ್ಲಪ್ಪಾ ಅಂತ ಟೈಮು ಹೋಗದನ್ನೇ ಲೆಕ್ಕಾ ಹಾಕ್ತಾವನೇ!

★★★

ಅತ್ತ ಕಡೆ ಪಾತಾಳಲೋಕದಲ್ಲಿ ಅನ್ನಾಹಾರವಿಲ್ಲದೆ ಕೂತಿದ್ದ ಭದ್ರಗೊಮಾರನಿಗೆ ಇದ್ದಕ್ಕಿದ್ದ ಹಾಗೆ ಗರಡಾಳ ಪಕ್ಷಿ ನೆನಪಾಯಿತು. ನೆನಿಸ್ಕತಿದ್ದಂಗೇನೆ ಗರಡಾಳ ಬಂದು 'ಅಪ್ಪಾ ಆವತ್ತು ನೀನು ನನ್ನ ಪ್ರಾಣ ಉಳಿಸಿದೆ. ನನ್ನಿಂದ ಈವತ್ತು ಏನಾಗಬೇಕು ಹೇಳು ಅಂದಿತು. ಭದ್ರಗೊಮಾರ ಅಯ್ಯಾ ಗರುಡದೇವಾ ರಾಜನ ಮಕ್ಕಳು ಇಬ್ಬರು ನನಗೆ ಮೋಸ ಮಾಡಿ ಹೋದರು. ನನ್ನ ಈ ಪಾತಾಳದಿಂದ ಹೊರಗಡೆ ಕರಕೊಂಡು ಹೋಗುವಂಥವನಾಗು ಅಂತ ಕೇಳಿದ. ಗರುಡಪಕ್ಷಿ ಅಷ್ಟೇ ತಾನೇ ಅಂತಂದು ಭದ್ರಗೊಮಾರನ್ನ ರೆಕ್ಕೆ ಮೇಲೆ ಕೂರಿಸ್ಕಂಡು ಭೂಲೋಕಕ್ಕೆ ತಂದುಬಿಟ್ಟಿತು. ಪಾತಾಳ ಲೋಕದಿಂದ ಬಂದ ಭದ್ರಗೊಮಾರ ಒಂದು ಹೆಬ್ಬುಲಿ ಮೇಲೆ ಕೂತುಕೊಂಡು ಚಂದ್ರಶೇಖರ ಮಹಾರಾಜನ ಪಟ್ಟಣದ ಕಡೆ ಬಂದ. ಕೋಟೆ ಮುಂದೆ ನಿಂತ್ಕಂಡ. ಸೇವಕರು ನಿಂತ್ಕಳಯ್ಯ ಅಲ್ಲಿ ಅಂದರು. ಹೆಬ್ಬುಲಿ ಪಟ್ಟಣದವರೆಗೆ ಅವನನ್ನ ಕರಕಂಡು ಬಂದದ್ದು ಅಲ್ಲೇ ಮಾಯವಾಗಿತ್ತು. ಭದ್ರಗೊಮಾರ ಸೇವಕರಿಗೆ ಸ್ವಾಮಿ ನನ್ಯಾಕೆ ತಡಿತೀರಿ, ನನ್ನ ಹೆಸರು ಕಜ್ಜಿ ಹನುಮಯ್ಯ, ಊರವರ ಬಟ್ಟೆನೆಲ್ಲ ಒಗಿಯವುನು ಅಂತಂದ. ಸೇವುಕರು ಆಯ್ತು ಹೋಗು